
ಮುನ್ನಡೆಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಂಗಾತಿ....

ಸಂಪುಟ : 1 ಸಂಚಿಕೆ : 3 ಪುಟ : 8 ಖಾಸಗಿ ಪ್ರಸಾರಕ್ಕಾಗಿ ಜನವರಿ 2006




- ಸಂಘಟನೆಯ ದಿಕ್ಕಿನಲ್ಲಿ ಸ್ವ-ಸಹಾಯ ಸಂಘಗಳು
- ಅಪ್ರತಿಮ ಚಳವಳಿಕಾರ – ಸಿಜಿಕೆ
- ಕನಿಷ್ಠವೇ...... ಗರಿಷ್ಠ
- ಕಾರ್ಮಿಕ ಚಳವಳಿಯಲ್ಲಿ ಮಹಿಳೆಯರು
- ಇ.ಎಸ್.ಐ. ಸೌಲಭ್ಯಗಳು : ಕಿರು ಮಾಹಿತಿ
- ಆರೋಗ್ಯ ಭಾಗ್ಯ • ಕಾಮನಬಿಲ್ಲು • ನೆರವು


(ಮಹಿಳಾ ಕಾರ್ಮಿಕರಿಂದ ಮೂಡಿದ ಕೌಶಲ್ಯ)

## ಸಂಪಾದಕೀಯ...

# ಜಾಗತೀಕರಣದಲ್ಲಿ ಕಾರ್ಮಿಕರು ಕಮರಿ ಹೋಗದಿರಲಿ....

ಆತ್ಮೀಯರೇ,

ಹೊಸ ವರ್ಷದ ಶುಭಾಶಯಗಳೊಂದಿಗೆ, ಸೂಜಿದಾರ ಪತ್ರಿಕೆಯ ಮೂರನೆಯ ಸಂಚಿಕೆಯನ್ನು ತಮ್ಮ ಕೈಗಿಡಲು ಹರ್ಷಿಸುತ್ತಿದ್ದೇವೆ. ಪತ್ರಿಕೆಯು ತನ್ನ ಮೂರನೆಯ ಸಂಚಿಕೆಯ ಬಿಡುಗಡೆಯ ವೇಳೆಗೆ ಗಾರ್ಮೆಂಟ್ಸ್ ಕಾರ್ಮಿಕರ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಪತ್ರಿಕೆಯು ಹೊರಬರುವುದನ್ನು ನಿರೀಕ್ಷಿಸುತ್ತಿರುವ ಕಾರ್ಮಿಕರು ಹಾಗೂ ಪತ್ರಿಕೆಯ ವರದಿಯಿಂದ ಹಲವಾರು ಬದಲಾವಣೆಗಳನ್ನು ಕೆಲವು ಆಡಳಿತವರ್ಗದವರು ಮಾಡಿಕೊಂಡಿರುವುದೇ ಈ ಯಶಸ್ಸಿಗೆ ಸಾಕ್ಷಿಯಾಗಿದೆ. ಆಡಳಿತ ವರ್ಗದವರ ಈ ಬದಲಾವಣೆಯು ಹಲವಾರು ಕಾರ್ಮಿಕರಿಗೆ ನ್ಯಾಯ ದೊರಕಿಸಿದೆ. ಪತ್ರಿಕೆಯ ಬಗ್ಗೆ ಕಾರ್ಮಿಕರು ದೂರವಾಣಿಯ ಮೂಲಕವೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದಾರೆ.

ಆತ್ಮೀಯರೇ, ರಾತ್ರಿ ಪಾಳಿಯಲ್ಲಿ ದುಡಿಯುತ್ತಿದ್ದ ಕಾಲ್ ಸೆಂಟರ್ ಉದ್ಯೋಗಿ ಪ್ರತಿಭಾ ಶೆಟ್ಟಿ ಅವರ ದುರ್ಮರಣಕ್ಕೆ ತಮ್ಮೆಲ್ಲರ ಪರವಾಗಿ ನಮ್ಮ ಸಂತಾಪವನ್ನು ಸೂಚಿಸುತ್ತಾ, ಮಹಿಳೆಯರಿಗೆ ರಾತ್ರಿ ಪಾಳಿ ಬೇಕೇ ಬೇಡವೇ?, ಬೇಕಾದರೆ ಅವರ ಸುರಕ್ಷತೆಗೆ ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ದೇಶಾದ್ಯಂತ ನಡೆಯುತ್ತಿರುವ ಚರ್ಚೆಗೆ ನಾವೂ ಸಹ ದನಿಯನ್ನು ಸೇರಿಸುತ್ತಿದ್ದೇವೆ. ಈ ಘಟನೆಗೆ ವ್ಯಾಪಕವಾದ ಪ್ರತಿಭಟನೆ ಹಾಗೂ ಸಹಾನುಭೂತಿ ವ್ಯಕ್ತವಾಗುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯಕ್ಕೆ ಮೇಲು ಕೀಳು, ಶ್ರೀಮಂತ, ಬಡವ, ವಿದ್ಯಾವಂತ, ಅವಿದ್ಯಾವಂತ ಈ ಯಾವ ಮಾನದಂಡವೂ ಇಲ್ಲವೆಂದು ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರತಿಭಾ ಸಾವಿಗೆ ವ್ಯಕ್ತವಾಗುತ್ತಿರುವ ಈ ವ್ಯಾಪಕ ಸ್ಪಂದನೆಗಳು ಬೇರೆ ಹೆಣ್ಣು ಮಕ್ಕಳು, ಉದಾಹರಣೆಗೆ ಗಾರ್ಮೆಂಟ್ಸ್ ಉದ್ಯಮದಲ್ಲಿ ಮಹಿಳಾ ಕಾರ್ಮಿಕರು ದೌರ್ಜನ್ಯಕ್ಕೆ ಒಳಗಾದಾಗಲೂ ಆಗಬೇಕೆಂಬುದೇ ನಮ್ಮ ಕಳಕಳಿ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ವಿಫಲವಾಗಿರುವುದರಿಂದ ಕಾರ್ಮಿಕರಿಗೆ ಅನ್ಯಾಯವಾಗುತ್ತಿರುವುದಲ್ಲದೇ, ಹಲವಾರು ದುರ್ಘಟನೆಗಳು ನಡೆಯುತ್ತಿವೆ. ಡಿಸೆಂಬರ್ 6ರಂದು ನವದೆಹಲಿಯ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಸಂಭವಿಸಿದ ಬೆಂಕಿ ದುರಂತವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 12 ಮಂದಿ ಅಮಾಯಕ ಕಾರ್ಮಿಕರ ಸಾವಿಗೆ ಕಾರಣವಾದ ಈ ದುರಂತವು ಕಾರ್ಮಿಕರ ಜೀವಕ್ಕೆ ಯಾವುದೇ ಬೆಲೆಯಿಲ್ಲವೆಂದು ನಿರೂಪಿಸುತ್ತದೆ. ಇಂತಹ ದುರಂತಗಳು ಇನ್ನು ಮುಂದೆ ಮರುಕಳಿಸದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಕಾರ್ಖಾನೆಗಳ ಸುರಕ್ಷತಾ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿ, ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು ಹಾಗೂ ಕಾನೂನುಗಳನ್ನು ಉಲ್ಲಂಘಿಸುವ ಆಡಳಿತ ವರ್ಗಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿ ಕ್ರಮ ಕೈಗೊಳ್ಳಬೇಕು.

ನವದೆಹಲಿಯಲ್ಲಿ ನಡೆದ ಈ ದುರಂತಕ್ಕೆ, ಬೆಂಗಳೂರಿನ ಎಲ್ಲಾ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಪರವಾಗಿ ಮುನ್ನಡೆಯು ದಿನಾಂಕ 11–12–2005 ರಂದು ಸಂತಾಪ ಸೂಚಿಸಿ, ಆಡಳಿತ ವರ್ಗದವರ ವಿರುದ್ಧ ಪ್ರತಿಭಟನೆಯನ್ನು ನಡೆಸಿತು. ವಿಶ್ವವೇ ಜಾಗತೀಕರಣದ ಪ್ರಕ್ರಿಯೆಗೆ ಒಳಗಾಗುತ್ತಿರುವ ಈ ಸಂದರ್ಭದಲ್ಲಿ, ವಿಶ್ವದ ಎಲ್ಲಾ ಕಾರ್ಮಿಕರು ಒಂದಾದಲ್ಲಿ ಮಾತ್ರ ಕಾರ್ಮಿಕರಿಗೆ ನ್ಯಾಯ ಪಡೆಯಲು ಸಾಧ್ಯ. ಡಿಸೆಂಬರ್‌ನಲ್ಲಿ ನಡೆದ ದಕ್ಷಿಣ ಏಷ್ಯಾ ರಾಷ್ಟ್ರಗಳ ಗಾರ್ಮೆಂಟ್ಸ್ ಕಾರ್ಮಿಕ ಮುಖಂಡರ ಸಮಾವೇಶ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿದೆ.

ಬೆಂಗಳೂರಿನಲ್ಲಿ ಪ್ರತಿಭಾ ಸಾವಿನ ಹಿನ್ನೆಲೆಯಲ್ಲಿ, ಗಾರ್ಮೆಂಟ್ಸ್ ಉದ್ಯಮದ ಮಹಿಳೆಯರಿಗೆ ರಕ್ಷಣೆ, ಸುರಕ್ಷತೆ, ಒದಗಿಸುವ ಬಗ್ಗೆ ಕಾರ್ಮಿಕ ಸಚಿವ ಶ್ರೀ ತನ್ವೀರ್‌ಸೇಠ್, ಹಾಗೂ ಪೊಲೀಸ್ ಆಯುಕ್ತರಾದ ಶ್ರೀ ಅಜಯ್‌ಕುಮಾರ್ ಸಿಂಗ್ ಅವರು ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ಆಶಾದಾಯಕ ಸೂಚನೆಗಳಂತೆ ತೋರುತ್ತಿವೆ. ಜೊತೆಗೆ ರಾಜ್ಯ ಹೈ ಕೋರ್ಟ್ ದಿನಾಂಕ 6–1–2006ರಂದು ನೀಡಿರುವ "ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರ ಬಗ್ಗೆ ಕಾಳಜಿ ವಹಿಸಿದರಷ್ಟೇ ಸಾಲದು, ದೊಡ್ಡ ಸಂಖ್ಯೆಯಲ್ಲಿರುವ ಗಾರ್ಮೆಂಟ್ಸ್ ಉದ್ಯಮದ ಮಹಿಳೆಯರ ರಕ್ಷಣೆಗೂ ಸರ್ಕಾರ ಬದ್ಧವಾಗಿರಬೇಕು" ಎಂಬ ಆದೇಶ (ಕನ್ನಡಪ್ರಭ ವರದಿ) ನ್ಯಾಯಾಂಗವು ಈ ಕಾರ್ಮಿಕರ ಸಮಸ್ಯೆಯನ್ನು ಗುರುತಿಸಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುತ್ತದೆ.

(3ನೇ ಪುಟಕ್ಕೆ)



ಸಾಧನೆ

# ಸಂಘಟನೆಯ ದಿಕ್ಕಿನಲ್ಲಿ ಸ್ವ-ಸಹಾಯ ಸಂಘಗಳು

**ಭಾ**ರತದ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಮ್ಮಿಕೊಂಡ ಯೋಜನೆಯೇ ಸ್ವ-ಸಹಾಯ ಸಂಘಗಳ ರಚನೆ. ಗ್ರಾಮೀಣ ಮಹಿಳೆಯರ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯಲ್ಲಿ ಬದಲಾವಣೆ ತಂದು, ಅವರಲ್ಲಿ ನಾಯಕತ್ವ ಗುಣವನ್ನು ಬೆಳೆಸುವಲ್ಲಿ ಈ ಸ್ವ-ಸಹಾಯ ಸಂಘಗಳು ಯಶಸ್ವಿಯಾಗಿದೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಹಕ್ಕು ರಕ್ಷಣೆಯ ಬಗ್ಗೆ ಕೆಲಸ ಪ್ರಾರಂಭಿಸಿದ ಸಂದರ್ಭದಲ್ಲಿ, ಸಿವಿಡೆಪ್ ಸಂಸ್ಥೆಯು ಗಾಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಸಂಘಟಿಸುವ ನಿಟ್ಟಿನಲ್ಲಿ ಈ ಕಲ್ಪನೆಯನ್ನು ಬಳಸಿಕೊಳ್ಳುವ ನಿರ್ಧಾರ ತೆಗೆದುಕೊಂಡಿತು. ಈ ಮಹಿಳಾ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಿಸಿದಾಗ ಅವರಿಗೆ ಸಣ್ಣ ಉಳಿತಾಯ ಹಾಗೂ ಸುಲಭ ಸಾಲ ಸೌಲಭ್ಯವನ್ನು ಒದಗಿಸುವ ಈ ಸ್ವ-ಸಹಾಯ ಸಂಘಗಳ ರಚನೆಯು ಅತ್ಯಂತ ಅಗತ್ಯವಿದೆ ಎಂದು ತಿಳಿದು ಬಂದಿತು.

ಈ ಸ್ವ-ಸಹಾಯ ಸಂಘದ ಕಲ್ಪನೆಯು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಹೊಸದಾದರಿಂದ ಮೊದ ಮೊದಲು ಇದನ್ನು ಒಪ್ಪಿಕೊಳ್ಳಲು ಬಹಳ ಸಮಯವೇ ಹಿಡಿಯಿತು. ನಾಲ್ಕು ತಿಂಗಳ ಸತತ ಪ್ರಯತ್ನದಿಂದ ಮೊದಲಬಾರಿಗೆ ನಮಸ್ತೆ ಎಕ್ಸ್‌ಪೋರ್ಟ್ಸ್‌ನ ಸಂಪಿಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸ್ವ-ಸಹಾಯ ಸಂಘವು 2003ರ ಮಾರ್ಚ್ ತಿಂಗಳಿನಲ್ಲಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು. ನಂತರ ಆರು ತಿಂಗಳಿನಲ್ಲಿ ಆರೇಳು ಸಂಘವು ರಚನೆಯಾಗಿ ಮಹಿಳಾ ಕಾರ್ಮಿಕರಲ್ಲಿ ಸಂಚಲನವನ್ನುಂಟುಮಾಡಿತು. ತಮಗೆ ಬರುವ ವೇತನದಲ್ಲಿ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲದೆ ಬೇರೆಡೆ ಹೆಚ್ಚಿನ ಬಡ್ಡಿಗೆ ಸಾಲ ತೆಗೆದು, ಆ ಸಾಲ ತೀರಿಸಲು ತಮ್ಮ ಭವಿಷ್ಯನಿಧಿಯ ಹಣವನ್ನು ತೆಗೆಯುವುದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಒಂದು ಪದ್ಧತಿಯಾಗಿತ್ತು. ಆದರೆ ಸ್ವ-ಸಹಾಯ ಸಂಘಗಳ ರಚನೆಯ ನಂತರ ಅದರ ಸದಸ್ಯರ ಈ ರೀತಿಯ ವ್ಯವಹಾರ ಕಡಿಮೆ ಆಗಿದೆ.

ಡಿಸೆಂಬರ್ 2005ರಲ್ಲಿ, ಮೈಸೂರು ರಸ್ತೆಯ ವಿವಿಧ ಕಾರ್ಖಾನೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವ-ಸಹಾಯ ಸಂಘಗಳ ಸಂಖ್ಯೆ 25. ಈ ಸಂಘಗಳು ಬಲಗೊಳ್ಳಲು, ನಬಾರ್ಡ್ ಹಾಗೂ ಕೆನರಾ ಬ್ಯಾಂಕ್‌ನ ಆದರ್ಶಗ್ರಾಮ ಯೋಜನೆಯ ಅಧಿಕಾರಿಗಳಿಂದ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

25 ಸಂಘಗಳಲ್ಲಿ ಸುಮಾರು 375ಕ್ಕೂ ಹೆಚ್ಚು ಸದಸ್ಯರಿದ್ದು, ನಿಗದಿತ ದಿನಾಂಕಗಳಲ್ಲಿ ಸಂಘಗಳ ಸಭೆ ನಡೆದು, ಉಳಿತಾಯ, ಹಾಗೂ ಸಾಲ ಪ್ರಕ್ರಿಯೆಗಳ ನಿಯಮಿತವಾಗಿ ನಡೆಯುತ್ತಿವೆ. ಸದಸ್ಯರಿಗೆ ಮೊದಲು ರೂ 2000.00 ಸಾಲ ಕೊಡುತ್ತಿದ್ದ ಸಂಘಗಳು ಈಗ ಅದನ್ನು ರೂ. 10000.00ದಿಂದ ರೂ 15000.00ದ ವರೆಗೂ ವಿಸ್ತರಿಸಿದೆ. ಸುಮಾರು 350 ಮಂದಿ ಸದಸ್ಯರು ತುರ್ತು ಸಂದರ್ಭಕ್ಕೆ, ಮನೆ ಬಳಕೆಗೆ, ಮಕ್ಕಳ ವಿದ್ಯಾಭ್ಯಾಸಕ್ಕೆ, ಹಾಗೂ ಇತರ ಅಗತ್ಯಗಳಿಗಾಗಿ ಸಂಘಗಳಿಂದ ಸಾಲ ಸೌಲಭ್ಯ ಪಡೆದಿದ್ದಾರೆ. 2004 ಮಾರ್ಚ್ ತಿಂಗಳ ಲೆಕ್ಕಾಚಾರದಂತೆ ಎಲ್ಲಾ ಸಂಘಗಳ ಒಟ್ಟು ಹಣಕಾಸು ವ್ಯವಹಾರ ರೂ. 500000 ಲಕ್ಷಕ್ಕೂ ಮೀರಿದೆ. ಹಾಗೂ ಪ್ರತಿ ತಿಂಗಳೂ ರೂ. 1,05000.00ದ ವರೆಗೂ ವ್ಯವಹಾರ ನಡೆಯುತ್ತಿದೆ.

ಈ ಸಂಘಗಳು ಕಾರ್ಮಿಕರ ಹಣಕಾಸು ಪರಿಸ್ಥಿತಿಯ ಸುಧಾರಣೆಗೆ ಸಹಾಯ ಮಾಡಿದುದು ಮಾತ್ರವಲ್ಲದೆ ಅವರಲ್ಲಿ ಸಂಘಟನಾ ಮನೋಭಾವ ಬೆಳೆಸುವಲ್ಲಿ ಬಹಳ ಯಶಸ್ವಿಯಾಗಿದೆ. ತಮ್ಮ ತಮ್ಮ ಸಂಘಗಳ ಸದಸ್ಯರು ಏನಾದರೂ ಕಷ್ಟಕ್ಕೆ ಸಿಲುಕಿದಾಗ, ಕೌಟುಂಬಿಕ ದೌರ್ಜನ್ಯವನ್ನು ಎದುರಿಸಿದಾಗ ಎಲ್ಲ ಸದಸ್ಯರೂ ಒಟ್ಟಾಗಿ ಅವರಿಗೆ ಸಹಾಯಮಾಡಿದ ಉದಾಹರಣೆಗಳೂ ಬಹಳ ಇವೆ.

ಸಂಘಗಳ ಮುಂದಿನ ಯೋಜನೆಯೆಂದರೆ, ಈಗಿರುವ ಸಂಘಗಳೆಲ್ಲ ಒಟ್ಟು ಸೇರಿ ಒಂದು ಸೌಹಾರ್ದ ಸಹಕಾರಿಯನ್ನು ಸ್ಥಾಪಿಸುವುದು. ಚಿಕ್ಕ ಚಿಕ್ಕ ಘಟಕಗಳಲ್ಲಿ ಹಣ ಉಳಿತಾಯವಾದರೂ ಅದರ ಉಪಯೋಗ ವಿಶಾಲವಾಗಿ ಆಗುವುದಿಲ್ಲ. ಸೌಹಾರ್ದ ಸಹಕಾರಿಯಲ್ಲಿ ಸಾಲ ಸೌಲಭ್ಯ ಮತ್ತಷ್ಟು ಜನಕ್ಕೆ ದೊರಕಲಿ ಎಂಬುದು ಅವುಗಳ ಉದ್ದೇಶವಾಗಿದೆ. ತಮ್ಮದೇ ಹಣ ಉಳಿಸಿ, ತಮಗೆ ತಾವೇ ಸಹಾಯ ಮಾಡಿಕೊಳ್ಳುತ್ತಿರುವುದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಒಂದು ಮಹತ್ವದ ಸಾಧನೆಯಾಗಿದೆ. □

**ಸಂವೇದನೆ.....**

*(2ನೇ ಪುಟದಿಂದ)*

ಈ ಎಲ್ಲ ಬೆಳವಣಿಗೆಯ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ಮಹಿಳಾ ನಿರ್ವಾಹಕರಿಗೆ ರಾತ್ರಿ ಪಾಳಿಯನ್ನು ನಿಷೇಧಿಸಿರುವುದು ಸ್ವಾಗತಾರ್ಹವಾಗಿದೆ. ಇದೇ ರೀತಿ ಬೇರೆಲ್ಲಾ ಆಡಳಿತ ವರ್ಗದವರು ತಮ್ಮ ಕಾರ್ಮಿಕರ ಸುರಕ್ಷತೆಗೆ ತಕ್ಷಣವೇ ಕಾರ್ಯ ಪ್ರವೃತ್ತರಾಗಬೇಕು.

ಮೈಸೂರು ರಸ್ತೆಯಲ್ಲಿ ಬಿಡದಿ ಸಮೀಪದಲ್ಲಿರುವ ಟೊಯೊಟೊ ಕಿರ್ಲೋಸ್ಕರ್ ಕಂಪನಿಯ ಕಾರ್ಮಿಕರನ್ನು ಆಡಳಿತ ವರ್ಗವು ಅಮಾನವೀಯವಾಗಿ ನಡೆಸಿಕೊಂಡು, ಕಾರ್ಖಾನೆಯನ್ನು ಕಾನೂನುಬಾಹಿರವಾಗಿ ಲಾಕ್-ಔಟ್ ಮಾಡಿರುವುದನ್ನು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಪರವಾಗಿ 'ಸೂಜಿ-ದಾರ' ಬಳಗವು ಖಂಡಿಸುತ್ತದೆ.

*– ಸಂಪಾದಕ ಮಂಡಳಿ*

**ಪಿ.ಎಫ್. ಬಡ್ಡಿದರ ಇಳಿಕೆ**

ಕಾರ್ಮಿಕರ ಭವಿಷ್ಯನಿಧಿಯ ಬಡ್ಡಿದರವು 9.5% ಮುಂದುವರಿಯಬೇಕೆಂದು ವಿವಿಧ ಕಾರ್ಮಿಕ ಸಂಘಟನೆಗಳ ಬೇಡಿಕೆಯನ್ನು ತಿರಸ್ಕರಿಸಿ, ಕೇಂದ್ರ ಸರ್ಕಾರವು 2005-2006ರ ಸಾಲಿಗೆ 8.5%ರ ಬಡ್ಡಿಯನ್ನು ನಿಗದಿಪಡಿಸಿ ಆದೇಶ ಹೊರಡಿಸಿದೆ.



Scanned with OKEN Scanner

# ಅಪ್ರತಿಮ ಚಳವಳಿಕಾರ : ಸಿಜಿಕೆ



ವಿಖ್ಯಾತ ರಂಗಕರ್ಮಿ, ದಲಿತ – ಮಹಿಳಾ ಪರ ಚಿಂತಕ, ಹೋರಾಟಗಾರ, ಗಾಂಧೀವಾದಿ ಸಿ.ಜಿ.ಕೆ. ದಿನಾಂಕ ೧೧-೧೧-೦೬ರಂದು ನಮ್ಮನಗಲಿದ್ದಾರೆ. ಪ್ರೀತಿಯ ಸಿ.ಜಿ.ಕೆ.ಗೆ ಗೌರವ ನುಡಿನಮನ ಇಲ್ಲಿದೆ.

ತನ್ನ ಅಂಗವೈಕಲ್ಯವನ್ನು ಮರೆತು, ದೇಶ ಸುತ್ತಿ, ಕೋಶ ಓದಿ, ಗಾಂಧೀವಾದ ಮೆರೆದ "ಸಮಗ್ರ ಗಾಂಧಿ" ೧೯೫೦ರಲ್ಲಿ ಮಂಡ್ಯದಲ್ಲಿ ಜನಿಸಿದರು. ೩ನೇ ವಯಸ್ಸಿಗೇ ವಯಸ್ಸಿಗೇ ತನ್ನೆರಡೂ ಕಾಲುಗಳು ಪೋಲಿಯೋ ಮಾರಿಗೆ ಬಲಿಯಾಯಿತು. ಆದರೂ ಎದೆಗುಂದದೆ ಒಬ್ಬ ಸಾಮಾನ್ಯ ಆರೋಗ್ಯವಂತ ಮನುಷ್ಯ ಮಾಡಬಹುದಾದ ಸಾಧನೆಯನ್ನು ಮೀರಿ ಬೆಳೆದರು.

ಮಂಡ್ಯದಲ್ಲಿ ಶಾಲಾ ಶಿಕ್ಷಣವನ್ನೂ, ಬೆಂಗಳೂರಿನ ನ್ಯಾಷನಲ್ ಕಾಲೇಜು ಹಾಗೂ ಸೆಂಟ್ರಲ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನು ಪಡೆದ ಸಿ.ಜಿ.ಕೆ ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿದ್ದರು.

ಅವರು ತಮ್ಮ ವೃತ್ತಿ ಜೀವನಕ್ಕಿಂತ, ಪ್ರವೃತ್ತಿಯಾಗಿ ರಂಗಭೂಮಿ, ಬರವಣಿಗೆಯನ್ನು ಅತಿಯಾಗಿ ಪ್ರೀತಿಸುತ್ತಿದ್ದರು.

೧೯೭೦ರಿಂದ ಇಲ್ಲಿಯವರೆಗೂ ಅವರು ನಡೆಸಿದ ರಂಗ ಚಟುವಟಿಕೆಗಳು, ಕಟ್ಟಿದ ರಂಗತಂಡಗಳು, ರಚಿಸಿ – ನಿರ್ದೇಶಿಸಿದ ನಾಟಕಗಳಿಗೆ ಲೆಕ್ಕವಿಲ್ಲ. ಇದಲ್ಲದೇ ಹಲವಾರು ನಾಟಕಗಳಿಗೆ ಅವರು ಧ್ವನಿ ಮತ್ತು ಬೆಳಕು ತಜ್ಞರಾಗಿಯೂ ಕೆಲಸ ಮಾಡಿದ್ದಾರೆ.

ತಮ್ಮೆಲ್ಲಾ ಚಟುವಟಿಕೆಗಳಲ್ಲಿ ದಲಿತಮಹಿಳೆಯರನ್ನು ಎತ್ತಿ ಹಿಡಿಯುತಿದ್ದ ಅವರು, ಅವರಿಗೆ ನೈತಿಕ ಬಲ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಯಾವೊಬ್ಬ ಮಹಿಳೆ, ದಲಿತ, ಯುವಕರು ತಮಗೆ ಇಂತಹ ವಿಷಯದಲ್ಲಿ ಆಸಕ್ತಿ ಎಂದ ತಕ್ಷಣ ಅವರಿಗೆ ಸಲಹೆ, ಮಾರ್ಗದರ್ಶನ ದೊರಕುತ್ತಿತ್ತು, ಸದಾ ಅವರಿದ್ದಲ್ಲಿ ದಂಡು ಇರುತ್ತಲೇ ಇತ್ತು.

ಅವರನ್ನು ಚಿಕ್ಕಂದಿನಿಂದಲೂ ಕಾಡಿದವರು ಬುದ್ಧ, ಗಾಂಧಿ, ಮಾರ್ಕ್ಸ್ ಮತ್ತು ಲೋಹಿಯಾ. ಅವರ ತತ್ವಾದರ್ಶಗಳಿಗೆ ಕಟ್ಟುಬಿದ್ದ ಸಿ.ಜಿ.ಕೆ ಬೆಂಗಳೂರು ವಿಶ್ವವಿದ್ಯಾಲಯದ ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಕಳೆದ ೩ ವರ್ಷಗಳಿಂದ ವಿದ್ಯಾರ್ಥಿಗಳಲ್ಲಿ ಗಾಂಧೀವಾದವನ್ನು ಬಿತ್ತುವ ಪ್ರಯತ್ನ ಮಾಡಿದ್ದರು.

ಚಳವಳಿಗಳಿಂದ ಸ್ವಸ್ಥ ಸಮಾಜ ಸ್ಥಾಪಿಸಬಹುದು ಎಂದು ಬಲವಾಗಿ ನಂಬಿದ್ದ ಅವರು ಜೆಪಿ ಚಳವಳಿಯನ್ನು ತಮ್ಮ ಕಡೆಯ ದಿನಗಳವರೆಗೂ ನೆನೆಯುತ್ತಿದ್ದರು. ಯುವಜನತೆಯನ್ನು ಬಡಿದೆಬ್ಬಿಸಲು ಮತ್ತೆ ಅಂತಹದೊಂದು ಚಳವಳಿ ನಡೆಯಬೇಕಿದೆ ಎಂದು ಹಂಬಲಿಸುತ್ತಿದ್ದರು.

೧೯೭೫ರಲ್ಲಿ ಇಂದಿರಾಗಾಂಧಿ ಸರ್ಕಾರ ಹೇರಿದ್ದ ತುರ್ತುಪರಿಸ್ಥಿತಿ ವಿರೋಧಿಸಿ ಬೀದಿನಾಟಕ ಮಾಧ್ಯಮವನ್ನು ಹುಟ್ಟುಹಾಕಿದವರಲ್ಲಿ ಸಿ.ಜಿ.ಕೆ. ಪ್ರಮುಖರು, 'ಸಮುದಾಯ' ಹೆಸರಿನೊಂದಿಗೆ ಸಮುದಾಯದ ಅಗತ್ಯ ಬಲ ಪ್ರಕಟಪಡಿಸಲು ದೇಶವ್ಯಾಪಿ ಚಳವಳಿ ನಡೆಸಿ, ಕ್ರಾಂತಿಕಾರಿ ಬದಲಾವಣೆ ತಂದರು.

ರೈತ ಚಳವಳಿ ಬಗ್ಗೆ ನಂಬಿಕೆಯಿದ್ದ ಅವರಿಗೆ 'ಸಾಲದ ಹೊರೆ ತಾಳದ ರೈತರ ಆತ್ಮಹತ್ಯೆ' ಮನ ಕಲಕಿತ್ತು. ಅದಕ್ಕಾಗಿ ಸಮುದಾಯ ತಂಡದೊಂದಿಗೆ ಬೀದಿನಾಟಕದ ಮೂಲಕ ರೈತರಿಗೆ ಆತ್ಮವಿಶ್ವಾಸ ಮತ್ತು ಈ ಬಗ್ಗೆ ಸರ್ಕಾರದ ಗಮನ ಸೆಳೆಯಲು ಜಾಥಾ ಹಮ್ಮಿಕೊಂಡಿದ್ದರು. ಹಾಗೆಯೇ ಜಾಗತೀಕರಣ ವಿರೋಧಿ, ಕೋಮುವಾದೀಕರಣ ಕುರಿತ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು.

ಗ್ರಾಮೀಣ ರಂಗಭೂಮಿಯನ್ನು ಬಲಿಷ್ಠಗೊಳಿಸಲು ದುಡಿದ ಹಾಗೂ ಅತೀ ಪ್ರೀತಿಯ ಸಾಣೇಹಳ್ಳಿಗೆ ತೆರಳಿ, ಗ್ರಾಮೀಣ ರೆಪರ್ಟರಿ "ಶಿವಸಂಚಾರ"ವನ್ನು ಸ್ಥಾಪಿಸಿದರು. ಶರಣರನ್ನು ಕುರಿತ ನಾಟಕಗಳನ್ನು ಹೊತ್ತು ನಾಡಿನಾದ್ಯಂತ ತಿರುಗಿದ್ದರು.

ಕಮ್ಯುನಿಸ್ಟ್ ಸಿದ್ಧಾಂತವನ್ನು ಮೈಗೂಡಿಸಿಕೊಂಡಿದ್ದ ಅವರು, ಜಾಗತೀಕರಣದ ಹೆಸರಿನಲ್ಲಿ, ಬಂಡವಾಳಶಾಹಿಗಳು, ಕಾರ್ಮಿಕರನ್ನು ಶೋಷಿಸುವುದನ್ನು ಖಂಡಿಸುತ್ತಿದ್ದರು. ನಗರ ಜೀವನದಲ್ಲಿ ಜಾಗತೀಕರಣ, ಜ್ಞಾನದ ಹಸಿವಿಗಿಂತ ದೈಹಿಕ ಹಸಿವು ಹೆಚ್ಚಿದೆ. ಐಷಾರಾಮಿ ಜೀವನದಲ್ಲಿ ಮುಳುಗಿರುವ ಜನತೆ, ಅನುಭವಿಸುತ್ತಿರುವ ವಸ್ತು, ವಸ್ತ್ರಗಳ ಉತ್ಪಾದನೆಯ ಹಿಂದಿನ ಕಾರ್ಮಿಕರ ಪರ ಯೋಚಿಸುವಂತೆ ಚಿಂತನೆಗೆ ಹಚ್ಚುತ್ತಿದ್ದರು.

ಮಾಧ್ಯಮಗಳಲ್ಲಿ ಮಹಿಳೆಯರನ್ನು ಅಶ್ಲೀಲವಾಗಿ ಬಿಂಬಿಸುವುದು, ಕ್ರೌರ್ಯವನ್ನು ವೈಭವೀಕರಿಸುವುದು ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದು ಸಾಹಿತಿ ಕಲಾವಿದರ ದಂಡು ಕಟ್ಟಿಕೊಂಡು ಧರಣಿ ನಡೆಸಿದ್ದರು.

ಗಾಂಧೀ ಚಿಂತನೆಯನ್ನು ಎಲ್ಲೆಡೆ ಹರಡಲು ೨೦೦೫ರ ಅಕ್ಟೋಬರ್‌ನಲ್ಲಿ ಮಂಡ್ಯದ ಶಿವಪುರದಿಂದ ಬೆಂಗಳೂರಿನವರೆಗೆ "ಅಂದು ದಂಡಿಯಾತ್ರೆ, ಇಂದು ಸ್ನೇಹಯಾತ್ರೆ" ಎಂಬ ಕಾರ್ಯಕ್ರಮ ನಡೆಸಿದ್ದರು. ಸಾಯುವ ಕಡೆ ದಿನದ ವರೆಗೂ ಕೆಲಸದಲ್ಲಿ ಕ್ರಿಯಾಶೀಲರಾಗಿದ್ದ ಅವರು ಸಾಕ್ಷ್ಯಚಿತ್ರವೊಂದನ್ನು ತಯಾರಿಸಲು ಚಿತ್ರದುರ್ಗಕ್ಕೆ ತೆರಳಿದ್ದರು. ಚಿತ್ರೀಕರಣ ಮುಕ್ತಾಯಗೊಳ್ಳಲು ಇನ್ನು ಒಂದು ದಿನ ಇರುವಾಗ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ.

ಸದಾ ತಮ್ಮ ಎಲ್ಲಾ ಕೆಲಸದಲ್ಲೂ ಶೇಕಡಾ ನೂರಕ್ಕೆ ನೂರರಷ್ಟು ಒಳಹೊಕ್ಕು ಯಶಸ್ವಿಯಾಗಿ ಪೂರೈಸುತ್ತಿದ್ದ ಅವರಿಗೆ ಅಂದು ಸಾವು ಆ ಅವಕಾಶ ಮಾಡಿಕೊಡಲಿಲ್ಲ.

ಯಾವಾಗಲೂ ಸಮಯ ಪ್ರಜ್ಞೆಯಿಂದಿರುತ್ತಿದ್ದ ಸಿ.ಜಿ.ಕೆ ನಿಗದಿತ ಸಮಯಕ್ಕೆ ೧೦ ನಿಮಿಷ ಮುಂಚಿತವಾಗಿ ಸ್ಥಳದಲ್ಲಿರುತ್ತಿದ್ದರು. ಕೊನೆಗೂ ಹಾಗೆಯೇ ಶಿಸ್ತನ್ನು ಉಳಿಸಿಕೊಂಡುಬಿಟ್ಟರು.

ಸ್ವಸ್ಥ ಸಮಾಜದೆಡೆಗಿನ ಅವರ ಕನವರಿಕೆ ನೀಗಿಸುವ ನಿಟ್ಟಿನಲ್ಲಿ ನಾವುಗಳು ಕೆಲಸ ಮಾಡಬೇಕಿದೆ. □



Scanned with OKEN Scanner


# ಕನಿಷ್ಠವೇ...... ಗರಿಷ್ಠ




"ಕಾರ್ಖಾನೆಯನ್ನು ನಡೆಸುವ ಮಾಲೀಕರು ತಮಗೆ ನಷ್ಟವಾಗುತ್ತಿರಲೀ, ಲಾಭವಾಗುತ್ತಿರಲೀ, ಕಾರ್ಮಿಕರಿಗೆ ಕನಿಷ್ಠ ವೇತನ ಕೊಟ್ಟೇ ಕೊಡತಕ್ಕದ್ದು, ಇಲ್ಲವಾದಲ್ಲಿ ಅವರು ಕಾರ್ಖಾನೆಯನ್ನು ನಡೆಸುವ ಅವಶ್ಯಕತೆಯಿಲ್ಲ" ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾದ ಗಜೇಂದ್ರ ಘಡ್ಕರ್‌ರವರು 1958ರಲ್ಲಿ ಅಹಮದಾಬಾದ್‌ನ ಬಿಜಯ್ ಕಾಟನ್ ಮಿಲ್ಸ್‌ನ ಕೇಸ್‌ನಲ್ಲಿ ಮಹತ್ವದ ತೀರ್ಪು ನೀಡಿದ್ದಾರೆ. 1995ರ ವರೆವಿಗೂ ಸುಪ್ರೀಂಕೋರ್ಟ್ ಇದೇ ತೀರ್ಪನ್ನು ಎತ್ತಿ ಹಿಡಿದಿದೆ.

ಪ್ರತಿಯೊಂದು ಉದ್ಯಮದಲ್ಲೂ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಪಡಿಸಲು ಒಂದು ಮಂಡಳಿ ರಚಿಸಬೇಕೆಂದು 1920ರಲ್ಲಿ ಕೆ.ಜಿ.ಆರ್. ಚೌಧರಿಯವರು ಮಂಡಿಸಿದ ಒಂದು ಠರಾವು, ಭಾರತದಲ್ಲಿ ಕನಿಷ್ಠವೇತನ ಜಾರಿಗೆ ಬರುವಲ್ಲಿ ಒಂದು ಮೊದಲ ಹೆಜ್ಜೆಯಾಗಿದೆ.

ಇದನ್ನು ಪರಿಗಣಿಸಿ 1943ರಲ್ಲಿ ಕಾರ್ಮಿಕರ ವೇತನ ಹಾಗೂ ಇತರ ಅಗತ್ಯಗಳ ಬಗ್ಗೆ ಸಂಶೋಧನೆ ನಡೆಸಲು ಸಮಿತಿಯೊಂದು ರಚನೆಯಾಯಿತು. ಈ ಸಮಿತಿಯ ವರದಿಯ ಆಧಾರದ ಮೇಲೆ 1946ರಲ್ಲಿ ಸ್ಟಾಂಡರ್ಡ್ ಲೇಬರ್ ಕಮಿಟಿಯು ಅಸಂಘಟಿತ ಕಾರ್ಮಿಕರಿಗೆ ಕೆಲಸದ ಸಮಯ ಕನಿಷ್ಠ ವೇತನ ಹಾಗೂ ವೇತನ ಸಹಿತ ರಜೆ ನಿಗದಿಪಡಿಸಲು ಒಂದು ಕಾನೂನು ತರಬೇಕೆಂದು ಶಿಫಾರಸ್ಸು ಮಾಡಿತು.




*ಗಾರ್ಮೆಂಟ್ಸ್ ಕಾರ್ಮಿಕರಿಗೆ ಒಂದೇ ರೀತಿಯ ಕನಿಷ್ಠ ವೇತನ ಜಾರಿ ಕುರಿತ ಏಷ್ಯಾ ಮಟ್ಟದ ಸಮಾವೇಶದ ಸಂದರ್ಭ*

ಇದನ್ನು ಪರಿಗಣಿಸಿ, 1948 ರಲ್ಲಿ ಜಾರಿಗೆ ಬಂದ ಕನಿಷ್ಠ ವೇತನದ ಕಾಯಿದೆಯ ಪ್ರಕಾರ ಪ್ರತಿಯೊಂದು ರಾಜ್ಯವೂ ಸಹ ಕೆಲವೊಂದು ಉದ್ಯಮಗಳನ್ನು ಗುರುತಿಸಿ ಅವುಗಳಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸಬೇಕು. ಕರ್ನಾಟಕ ಸರ್ಕಾರವು ಗಾರ್ಮೆಂಟ್ಸ್ ಉದ್ಯಮವನ್ನು "ಟೈಲರಿಂಗ್ ಇಂಡಸ್ಟ್ರೀ" ಎಂದು ಗುರುತಿಸಿ 1979ರಿಂದ ಕನಿಷ್ಠ ವೇತನವನ್ನು ನಿಗದಿ ಪಡಿಸಿದೆ.

ಕಾರ್ಮಿಕರು ತಮ್ಮ ಮೂಲಭೂತ ಅವಶ್ಯಕತೆಗಳನ್ನು (ಊಟ ಬಟ್ಟೆ) ಪೂರೈಸಿಕೊಳ್ಳಲು ಎಷ್ಟು ಅವಶ್ಯಕತೆಯಿದೆಯೋ ಅದರ ಆಧಾರದ ಮೇಲೆ ಕನಿಷ್ಠ ವೇತನವು ನಿಗದಿಯಾಗುತ್ತದೆ. ಇದನ್ನು ನಿಗದಿ ಪಡಿಸಲು ರಚನೆಯಾಗಿರುವ ಕನಿಷ್ಠ ವೇತನ ಮಂಡಳಿಯಲ್ಲಿ, ಕಾರ್ಮಿಕ ಸಂಘಟನೆಗಳ ನಾಯಕರು, ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಭಾಗವಹಿಸುತ್ತಾರೆ.

ಪ್ರಸ್ತುತ ಕರ್ನಾಟಕದಲ್ಲಿ "ಟೈಲರಿಂಗ್ ಇಂಡಸ್ಟ್ರೀಸ್"ಗೆ ತುಟ್ಟಿಭತ್ಯೆ (ಡಿ.ಎ)ಯೂ ಸೇರಿದಂತೆ, ರೂ. 84.64ಗಳು ಕನಿಷ್ಠ ವೇತನವಾಗಿ ನಿಗದಿಯಾಗಿದೆ. ಗಾರ್ಮೆಂಟ್ಸ್ ಕಾರ್ಖಾನೆಗೆ ಸೇರುವ ಪ್ರತಿಯೊಬ್ಬ ಕಾರ್ಮಿಕರಿಗೂ ಇದಕ್ಕಿಂತ ಕಡಿಮೆ ವೇತನ ಕೊಡುವ ಹಾಗಿಲ್ಲ. ಆದರೆ ಎಷ್ಟು ಮಂದಿ ಕಾರ್ಮಿಕರಿಗೆ ಇದರ ಬಗ್ಗೆ ತಿಳಿದಿದೆ? ಕೆಲವು ಕಾರ್ಖಾನೆಗಳಲ್ಲಿ ರೂ. 1200ರಿಂದ 1500.00 ಗಳ ಮಾಸಿಕ ವೇತನ ಕಾರ್ಮಿಕರಿಗೆ ನೀಡುತ್ತಿದ್ದಾರೆ. ಸುಪ್ರೀಮ್ ಕೋರ್ಟ್‌ನ ಆದೇಶವಿದ್ದರೂ, ಕೆಲವು ಕಾರ್ಖಾನೆಗಳ ಮಾಲೀಕರು ಕಾರ್ಮಿಕರನ್ನು ವಂಚಿಸುತ್ತಿದ್ದಾರೆ. ಈ ಕಾನೂನನ್ನು ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನ್ಯಾಯಾಲಯಗಳಿಗೆ ಅಧಿಕಾರವಿದೆ

ಕೆಲವು ಕಾರ್ಖಾನೆಗಳಲ್ಲಿ ಕನಿಷ್ಠ ವೇತನವನ್ನು ನೀಡುತ್ತಿದ್ದು, ಕಾರ್ಮಿಕರಿಗೆ ನ್ಯಾಯ ಒದಗಿಸುತ್ತಿದ್ದಾರಾದರೂ, ಆ ವೇತನವನ್ನೇ ಮಿತಿಯನ್ನಾಗಿ ಪರಿಗಣಿಸುತ್ತಿದ್ದಾರೆ. 1 ವರ್ಷ ಸೇವೆ ಸಲ್ಲಿಸಿದವರೂ, 20 ವರ್ಷ ಸೇವೆ ಸಲ್ಲಿಸಿದವರೂ ಒಂದೇ ವೇತನ (ಕನಿಷ್ಠ ವೇತನ) ಪಡೆದುಕೊಳ್ಳುತ್ತಿದ್ದಾರೆ.

ಕಾರ್ಮಿಕರ ಸೇವೆಯ ಅವಧಿಗಾಗಲೀ, ಕೆಲಸದ ಅನುಭವಕ್ಕಾಗಲೀ ಬೆಲೆಯೇ ಸಿಗುತ್ತಿಲ್ಲ. ಆದ್ದರಿಂದ ಕನಿಷ್ಠ ವೇತನ ಎಂದರೆ ಇದಕ್ಕಿಂತ ಕಡಿಮೆ ಕೊಡಬಾರದು ಎಂದು ಮಾತ್ರ ಎಲ್ಲರಿಗೂ ಸ್ಪಷ್ಟವಾಗಬೇಕೇ ಹೊರತು, ಇದೇ ಗರಿಷ್ಠ ಮಿತಿಯಾಗಬಾರದು. ಕಾರ್ಮಿಕರ ಸೇವಾವಧಿ, ಹಾಗೂ ಅನುಭವಕ್ಕೂ ಸ್ವಲ್ಪ ಬೆಲೆ ಸಿಗಬೇಕು. ಕಾರ್ಮಿಕರು ಹಾಗೂ ಮಾಲೀಕರು ಈ ನಿಟ್ಟಿನಲ್ಲಿ ಯೋಚಿಸಬೇಕಿದೆ. ❑

## ನಿಮ್ಮ ಮಾತು

- ಅಕ್ಟೋಬರ್ ಸಂಚಿಕೆಯ 'ಸಾಧನೆ' ಅಂಕಣ ಓದಿ ಬಹಳ ಆತ್ಮವಿಶ್ವಾಸ ಬಂತು. ನಮ್ಮಂತೆಯೇ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುವವರು ಕಾರ್ಮಿಕ ಸಂಘ ರಚಿಸಿಕೊಂಡು, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡಿರುವುದು ನೋಡಿ, ನಮಗೂ ಏಕೆ ಸಾಧ್ಯವಿಲ್ಲ ಎನ್ನಿಸಿತು. ಮುನ್ನಡೆಯಿಂದ ಸೂಕ್ತ ಮಾರ್ಗದರ್ಶನ ಕೋರುತ್ತೇವೆ.

  *–ಕಾರ್ಮಿಕರು,* ತುಮಕೂರು ರಸ್ತೆ

- ಸೂಜಿ – ದಾರ ಪತ್ರಿಕೆ ಬಹಳ ಚೆನ್ನಾಗಿದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ಬೇಕಾದ ಎಲ್ಲಾ ಮಾಹಿತಿಯೂ ಇದರಲ್ಲಿದೆ ಎನ್ನಬಹುದು.

  *–ಸುಮಾ, VF India,* ಮೈಸೂರು ರಸ್ತೆ

- ಓಟಿಯೋ......ಓಸಿಯೋ...... ಅಂಕಣ ಓದಿ, ಮಾಲೀಕರ ದೌರ್ಜನ್ಯಕ್ಕೆ ಕೊನೆಯೇ ಇಲ್ಲವೇ ಎನ್ನಿಸಿತ್ತು. ಆದರೆ ಹೇಗೋ ಈ ಸೂಜಿ – ದಾರ ಮಾಲೀಕರ ಕೈ ತಲುಪಿ, ನಮ್ಮ ಕಾರ್ಖಾನೆಯಲ್ಲಿ ಓ.ಟಿ ಮಾಡಿಸುವುದು ನಿಂತು ಹೋಗಿದೆ. ಹೀಗೆಯೇ ಎಲ್ಲಾ ಶೋಷಣೆಗಳನ್ನು ಪತ್ರಿಕೆಯಲ್ಲಿ ಬರೆದು, ಮಾಲೀಕರು ಬದಲಾಗುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

  *ಹೆಸರು ಬೇಡ*
  *FFI,* ತುಮಕೂರು ರಸ್ತೆ
  *(ದೂರವಾಣಿ ಪ್ರತಿಕ್ರಿಯೆ)*

# ಕಾರ್ಮಿಕ ಚಳವಳಿಯಲ್ಲಿ ಮಹಿಳೆಯರು

ಕೈಗಾರಿಕಾ ಹೋರಾಟದಲ್ಲಿ ಕಾರ್ಮಿಕ ವರ್ಗದ ಪ್ರವೇಶದೊಂದಿಗೆ ಮಹಿಳೆಯರ ಚಟುವಟಿಕೆಗಳು ಆರಂಭವಾದವು. ಮಹಿಳಾ ಕಾರ್ಮಿಕರ ಚಳವಳಿಯು, ಸಾರ್ವತ್ರಿಕ ಕಾರ್ಮಿಕ ಚಳವಳಿಯ ಅವಿಭಾಜ್ಯ ಅಂಗ ವಾಗಿತ್ತು.

ಮಹಿಳೆಯ ಕೂಲಿ-ಸಂಬಳಗಳು ಪುರುಷರಿಗೆ ಕೊಡುವುದರ ಸರಾಸರಿ ಅರ್ಧದಷ್ಟಿತ್ತು. ಮಹಿಳೆ ಗರ್ಭಿಣಿಯಾದ ತಕ್ಷಣ ಆಕೆಯನ್ನು ಕೆಲಸದಿಂದ ವಜಾ ಮಾಡಲಾಗುತ್ತಿತ್ತು. ಅವರಿಗೆ ವೈದ್ಯಕೀಯ ಸೌಲಭ್ಯಗಳು, ಹೆರಿಗೆ ರಜೆ ಅಥವಾ ಮಕ್ಕಳಿಗೆ ಹಾಲುಣಿಸಲು ಕಾಲಾವಧಿ, ಇವು ಯಾವುವೂ ಇರಲಿಲ್ಲ. ಅಪೌಷ್ಠಿಕತೆ ಮತ್ತು ಬಡತನದ ಜೊತೆಗೆ ಕಠಿಣವಾದ ಬಂಡವಾಳಶಾಹಿ ಉತ್ಪಾದನಾ ವಿಧಾನದಡಿ ಅತಿ ದುಡಿಮೆ – ಇವುಗಳಿಂದ ಮಹಿಳೆಯರ ಆರೋಗ್ಯ ಬಹು ಬೇಗನೆ ಕ್ಷೀಣಿಸಿ, ಮಕ್ಕಳ ಆರೋಗ್ಯವಂತ ಬೆಳವಣಿಗೆಗೂ ಅಡ್ಡಿಯಾಗುತ್ತಿತ್ತು.




1870ರಿಂದ 1905ರ ನಡುವಿನ ಎಲ್ಲಾ ದಂಗೆಗಳಲ್ಲೂ, ಎಲ್ಲಾ ಕಾರ್ಖಾನೆ ಗಲಭೆಗಳಲ್ಲೂ ಮಹಿಳೆಯರು ಪುರುಷ ಕಾರ್ಮಿಕರಿಗೆ ಹೆಗಲೆಣೆಯಾಗಿ ಸಕ್ರಿಯ ಪಾತ್ರ ವಹಿಸಿದರು. 1874ರಲ್ಲಿ ಕಾರ್ಖಾನೆ ಹೋರಾಟಗಳಲ್ಲಿ ಮಹಿಳಾ ಕಾರ್ಮಿಕರ ಪಾತ್ರ ಅಭಿನಂದನಾರ್ಹವಾಗಿತ್ತು. 1874ರಲ್ಲಿ ಸೇಂಟ್ ಪೀಟರ್ಸ್ ಬರ್ಗ್‌ನ ನೊವಾಯಾ ಪ್ರಯಾದಿಲ್ನಾ ಕಾರ್ಖಾನೆಯಲ್ಲಿ ನಡೆದ ಮುಷ್ಕರದಲ್ಲೂ ಮಹಿಳೆಯರು ಸಕ್ರಿಯ ಪಾತ್ರ ವಹಿಸಿದ್ದರು. 1885ರಲ್ಲಿ ಒರೆಖೊವೊ-ಝುಯವೊ ಪ್ರಖ್ಯಾತ ಜವಳಿ ಕಾರ್ಮಿಕರ ಮುಷ್ಕರದಲ್ಲಿ ಮಹಿಳೆಯರೇ ನೇತೃತ್ವ ವಹಿಸಿದ್ದರು. ಆ ಮುಷ್ಕರದಲ್ಲಿ ಕಾರ್ಖಾನೆ ಕಟ್ಟಡಗಳು ನಾಶವಾದವು. ಝರ್ ಶಾಹಿ ಸರ್ಕಾರವು ಕಾರ್ಮಿಕರ ಬೇಡಿಕೆಗಳನ್ನು ಒಪ್ಪಲೇಬೇಕಾಯಿತು.

1895ರಲ್ಲಿ ಯುರೋಸ್ಲಾವ್ ಕಾರ್ಖಾನೆಯಲ್ಲಿ ನಡೆದ ದಂಗೆ ಮಹಿಳಾ ನೇಕಾರರ ನೆರವಿನಿಂದಲೇ ನಡೆಯಿತು. 1894-96 ರ ನಡುವೆ ಅಲ್ಲಲ್ಲಿ ನಡೆದ ಆರ್ಥಿಕ ಮುಷ್ಕರಗಳಲ್ಲಿ ಮಹಿಳಾ ಕಾರ್ಮಿಕರು ಉತ್ಸಾಹದಿಂದ ಪಾಲ್ಗೊಂಡರು. 1896 ಬೇಸಿಗೆಯಲ್ಲಿ ನಡೆದ ಜವಳಿ ಕಾರ್ಮಿಕರ ಚರಿತ್ರಾರ್ಹ ಮುಷ್ಕರದಲ್ಲಿ ಪುರುಷರೊಂದಿಗೆ ಮಹಿಳಾ ಕಾರ್ಮಿಕರು ಪೂರ್ತಿಯಾಗಿ ಭಾಗವಹಿಸಿದ್ದರು.

ಶೋಷಿತರೂ, ಅಂಜುಬುರುಕರೂ ಹಾಗೂ ಯಾವುದೇ ಹಕ್ಕಿಲ್ಲದವ ರಾಗಿದ್ದ ಕಾರ್ಮಿಕ ಮಹಿಳೆಯರು, ಕ್ಷೋಭೆ ಮತ್ತು ಮುಷ್ಕರಗಳ ವೇಳೆ ಧುತ್ತನೆ ಬೆಳೆದು, ತಲೆಯೆತ್ತಿ ನಿಂತು ಹೋರಾಡುವುದನ್ನು ಕಲಿತರು. ಕಾರ್ಮಿಕ ಚಳವಳಿಯಲ್ಲಿ ಪಾಲ್ಗೊಳ್ಳುವಿಕೆಯು ಮಹಿಳಾ ಕಾರ್ಮಿಕರನ್ನು ವಿಮೋಚನೆಗೆ ಹತ್ತಿರ ತಂದಿತು. ಕೇವಲ ಕಾರ್ಮಿಕ ಮಹಿಳೆಯರಾಗಿ ಅಲ್ಲ, ಕುಟುಂಬದಲ್ಲಿ ಬಹಳ ದಮನಕ್ಕೆ ಒಳಗಾದ ಮಹಿಳೆಯರಾಗಿಯೂ ಸಹ! ಅದು ಅವರ ಬದುಕಿಗೆ ಹೊಸ ಹೊಸ ಆಯಾಮಗಳನ್ನು ಒದಗಿಸಿತು. ಆದರೆ ಮಹಿಳೆಯರ ಚಿಂತಾಜನಕ ಪರಿಸ್ಥಿತಿಗಳು ಹಾಗೂ ಅದೆಲ್ಲದರ ವಿರುದ್ಧ ಹೋರಾಡುವ ಮಾರ್ಗದ ಬಗೆಗೆ ಸತತವಾದ ರಾಜಕೀಯ ಶಿಕ್ಷಣದ ಕೊರತೆ ತುಂಬ ಇತ್ತು. ಹೀಗಾಗಿ ಮುಷ್ಕರದ ಚಟುವಟಿಕೆಗಳೆಲ್ಲ ತಣ್ಣಗಾಗಿ ಗೆದ್ದೋ ಸೋತೋ ಕೆಲಸಕ್ಕೆ ಹಿಂದಿರುಗಿದ ನಂತರ, ಮಹಿಳೆಯರೆಲ್ಲ ಪುನಃ ಚದುರಿ ಹೋಗಿ ದೂರದೂರವಾಗಿ ಬಿಡುತ್ತಿದ್ದರು.

ಮತ್ತೊಮ್ಮೆ ಸಮಸ್ಯೆ ಭುಗಿಲೆದ್ದಾಗ ಹೋರಾಟಕ್ಕಾಗಿ ಬೀದಿಗಿಳಿಯುತ್ತಿದ್ದರು. ಇಂತಹ ಅನೇಕ ಹೋರಾಟದ ಫಲವೇ ಇಂದಿನ ಮಹಿಳಾ ಕಾರ್ಮಿಕರಿಗೆ ದಕ್ಕಿರುವ ಹಕ್ಕುಗಳು. □

## ಆರೋಗ್ಯ ಭಾಗ್ಯ

ಸ್ನೇಹಿತರೇ ನಮ್ಮ ದಿನನಿತ್ಯದ ಜೀವನದಲ್ಲಿ ಬಳಸುವ ಕೆಲವು ಆಹಾರ ಪದಾರ್ಥಗಳು ಕೆಲವು ಗಂಭೀರ ಹಾಗೂ ಸಾಮಾನ್ಯ ಕಾಯಿಲೆಗಳನ್ನು ನಿವಾರಿಸಲು ಬಹಳ ಸಹಾಯಮಾಡುತ್ತವೆ. ಅಂತಹ ಕೆಲವು ಮನೆಮದ್ದುಗಳು ನಿಮಗಾಗಿ

**ಈರುಳ್ಳಿ :** ಸುಟ್ಟ ಈರುಳ್ಳಿಯನ್ನು ತಿಂದರೆ ಅಜೀರ್ಣ ಮತ್ತು ಆಮಶಂಕೆ ನಿವಾರಣೆಯಾಗುವುದು. ಚೇಳು ಅಥವಾ ಜೇನುಹುಳ ಕಚ್ಚಿದ ಜಾಗಕ್ಕೆ ಹಸಿ ಈರುಳ್ಳಿಯ ಸಿಪ್ಪೆ ಸುಲಿದು ಜಜ್ಜಿ ತಿಕ್ಕುವುದರಿಂದ ಶೀಘ್ರವೇ ನೋವು ಉಪಶಮನವಾಗುವುದು

**ಎಳನೀರು :** ಎಳನೀರಿನಿಂದ ಕೆಲವು ವಾರಗಳು ಮುಖ ತೊಳೆಯುತ್ತಿದ್ದರೆ ಮೊಡವೆಗಳು ಮಾಯುತ್ತವೆ. ಕಪ್ಪುಕಲೆಗಳು ದೂರವಾಗಿ ಮುಖ ಕಾಂತಿಯುತವಾಗುತ್ತದೆ.

**ಎಳ್ಳು :** ಎರಡು ಅಥವಾ ಮೂರು ಚಮಚ ಎಳ್ಳನ್ನು ಬೆಣ್ಣೆಯೊಡನೆ ಕೂಡಿಸಿ ಅರೆದು ಕೆಲವು ದಿನ ಬೆಳಿಗ್ಗೆ ಹೊತ್ತು ಸೇವಿಸುವುದರಿಂದ ರಕ್ತ ಮೂಲವ್ಯಾಧಿ ಶಮನವಾಗುವುದು.

**ಜೇನುತುಪ್ಪ :** ವಸಡುಗಳು ಊದಿಕೊಂಡು ಹಲ್ಲು ನೋವು ಉಂಟಾದರೆ ಜೇನುತುಪ್ಪದಲ್ಲಿ ನೆನೆಸಿದ ಹತ್ತಿಯನ್ನು ನಾಲ್ಕಾರು ಬಾರಿ ಇಟ್ಟುಕೊಂಡರೆ ಹಲ್ಲು ನೋವು ಮತ್ತು ವಸಡಿನ ಊತ ನಿವಾರಣೆಯಾಗುವುದು.

**ಮೆಹಂದಿ :** ಚಳಿಗಾಲದ ಸಾಮಾನ್ಯ ತೊಂದರೆಯೆಂದರೆ ಪಾದಗಳು ಬಿರುಕು ಬಿಟ್ಟು ನೋವಾಗುವುದು. ಮೆಹಂದಿ ಎಲೆಗಳನ್ನು ಪೇಸ್ಟ್ ರೀತಿ ಮಾಡಿಕೊಂಡು ಬಿರುಕು ಬಿಟ್ಟ ಜಾಗಕ್ಕೆ ಲೇಪಿಸಿದರೆ ಗುಣ ಕಾಣುವುದು.

**ಕಿತ್ತಳೆ :** ಮಕ್ಕಳಿಗೆ ಮೈ ಒಡೆದಾಗ ದಿನಕ್ಕೆರಡು-ಬಾರಿ ಕಿತ್ತಳೆ ರಸ ಕೊಡಬಹುದು ಅಥವಾ ಸಾಸುವೆ ಎಣ್ಣೆಯಿಂದ ಮೈಯನ್ನು ಮಸಾಜ್ ಮಾಡಬಹುದು.

**ರಾಗಿ :** ನೆಗಡಿಯಿಂದ ಬಳಲುವವರು ರಾಗಿಹಿಟ್ಟನ್ನು ಅರಿಶಿನದ ಪುಡಿಯ ಜೊತೆಗೆ ಕೆಂಡದ ಮೇಲೆ ಸ್ವಲ್ಪ ಸ್ವಲ್ಪವೇ ಹಾಕಿದಾಗ ಬರುವ ದಟ್ಟವಾದ ಹೊಗೆಯನ್ನು ಮೂಗಿನ ಮೂಲಕ ಸೇವಿಸುವುದರಿಂದ ನೆಗಡಿ ಗುಣವಾಗುತ್ತದೆ.

*(ಸಂಗ್ರಹ)*



Scanned with OKEN Scanner

# ಇ.ಎಸ್.ಐ. ಸೌಲಭ್ಯಗಳು : ಕಿರು ಮಾಹಿತಿ

ಕಾರ್ಮಿಕರು ಈ ದೇಶದ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ. ಅವರ ಹಿತರಕ್ಷಣೆ ದೇಶದ ಹಾಗೂ ಸರ್ಕಾರದ ಪ್ರಮುಖ ಕರ್ತವ್ಯವಾಗಿದೆ. ಅದರಿಂದಲೇ ಕಾರ್ಮಿಕರ ರಾಜ್ಯ ವಿಮಾ ಸೌಲಭ್ಯವು ಕಾರ್ಮಿಕರಿಗಾಗಿ ಜಾರಿಗೆ ತಂದ ಮೊತ್ತ ಮೊದಲ ಯೋಜನೆಯಾಗಿದೆ. ಇದರಡಿಯಲ್ಲಿ ಕಾರ್ಮಿಕರಿಗೆ ವೈದ್ಯಕೀಯ ಹಾಗೂ ನಗದು ಸೌಲಭ್ಯಗಳು ದೊರಕುತ್ತವೆ.

1. ವಿದ್ಯುತ್‌ನ ಸಹಾಯದಿಂದ ನಡೆಯುವ ಕಾರ್ಖಾನೆಯಲ್ಲಿ ಹತ್ತು ಮಂದಿ ಕಾರ್ಮಿಕರಿದ್ದು, ವಿದ್ಯುತ್ ಸಹಾಯವಿಲ್ಲದೆ 20 ಜನ ಕಾರ್ಮಿಕರಿಗಿಂತ ಹೆಚ್ಚು ಇರುವ ಎಲ್ಲಾ ಕಾರ್ಖಾನೆಗಳಿಗೂ ಇ.ಎಸ್.ಐ. ಯೋಜನೆ ಅನ್ವಯಿಸುತ್ತದೆ.
2. ಕೆಲಸಕ್ಕೆ ಸೇರಿದ ಹತ್ತು ದಿನಗಳ ಒಳಗೆ ಫಾರಂ ನಂ. 1ರಲ್ಲಿ ಕಾರ್ಮಿಕರ ವಿವರಗಳನ್ನು ಇ.ಎಸ್.ಐ. ಲೋಕಲ್ ಆಫೀಸ್‌ಗೆ ಸಲ್ಲಿಸುವುದು ಮಾಲೀಕರ ಕರ್ತವ್ಯ.
3. ಇ.ಎಸ್.ಐ. 7500 ರೂ.ಗಿಂತ ಕಡಿಮೆ ಸಂಬಳ ಪಡೆಯುವ ಎಲ್ಲಾ ಕಾರ್ಮಿಕರಿಗೂ ಅನ್ವಯಿಸುತ್ತದೆ.
4. ದಿನಕ್ಕೆ 50.00 ರೂ.ಗಿಂತ ಕಡಿಮೆ ವೇತನ ಪಡೆಯುವ ಕಾರ್ಮಿಕರು ವಂತಿಗೆ ಕೊಡಬೇಕಾಗಿಲ್ಲ. ಮಾಲೀಕರ ವಂತಿಗೆಯಿಂದ ಇತರೆ ಕಾರ್ಮಿಕರು ಪಡೆದುಕೊಳ್ಳುವ ಸೌಲಭ್ಯವನ್ನು ಇವರೂ ಪಡೆಯಬಹುದು.



ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗೆ ಉಚಿತ ಕಾನೂನು ನೆರವು ಶಿಬಿರದಲ್ಲಿ ಖ್ಯಾತ ವಕೀಲರಾದ ಶ್ರೀಮತಿ ಹೇಮಲತಾ ಮಹಿಷಿ

## ಅರಿವು



5. ಪ್ರತಿ ತಿಂಗಳೂ ಕಾರ್ಮಿಕರಿಂದ ರೂ.1.75% ಹಾಗೂ ಮಾಲೀಕರಿಂದ ರೂ. 4.75% ಅನ್ನು ಸೇರಿಸಿ ಇ.ಎಸ್.ಐ.ಗೆ ವಂತಿಗೆ ನೀಡಬೇಕು.
6. ಕಾರ್ಮಿಕರ ಗಂಡ / ಹೆಂಡತಿ, ತಂದೆ, ತಾಯಿ, ಮತ್ತು 21 ವರ್ಷಕ್ಕಿಂತ ಕಡಿಮೆ ಇರುವ ಗಂಡುಮಕ್ಕಳು, ಮದುವೆಯಾಗುವರೆಗೂ ಹೆಣ್ಣುಮಕ್ಕಳೂ ಇ.ಎಸ್.ಐ. ವೈದ್ಯಕೀಯ ಸೌಲಭ್ಯ ಪಡೆಯಹುದು.
7. ಹೊರ ರಾಜ್ಯಗಳಲ್ಲಿ ವಾಸ ಮಾಡುತ್ತಿರುವ ಕುಟುಂಬ ಸದಸ್ಯರೂ ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು (ಪ್ರತ್ಯೇಕ ಗುರುತಿನ ಚೀಟಿ)
8. ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆಗೆ ಒಳಗಾಗುವ ಮಹಿಳಾ ಕಾರ್ಮಿಕರಿಗೆ 14 ದಿನಗಳೂ, ಪುರುಷ ಕಾರ್ಮಿಕರಿಗೆ 7 ದಿನಗಳ ರಜೆಗೆ ಪೂರ್ಣ ವೇತನ ದೊರೆಯುತ್ತದೆ.
9. ಕಾರ್ಮಿಕರಿಗೆ ಗರ್ಭಪಾತವಾದ ಸಂದರ್ಭದಲ್ಲಿ 6 ವಾರಗಳ ಕಾಲ ವೇತನ ಸಹಿತ ರಜೆ ದೊರೆಯುತ್ತದೆ.
10. ಕೆಲಸ ಮಾಡುವ ಸಂದರ್ಭದಲ್ಲಿ ಅಪಘಾತವಾಗಿ ದುರ್ಮರಣ ಹೊಂದಿದಲ್ಲಿ, ಕಾರ್ಮಿಕರ ಕುಟುಂಬ ವರ್ಗಕ್ಕೆ (ತಾಯಿ, ಹೆಂಡತಿ, ಮಕ್ಕಳಿಗೆ) ನಿಗದಿತ ಪ್ರಮಾಣದಲ್ಲಿ ಪಿಂಚಣಿ ದೊರೆಯುತ್ತದೆ.
11. ಮಹಿಳಾ ಕಾರ್ಮಿಕರಿಗೆ ಇ.ಎಸ್.ಐ. ಆಸ್ಪತ್ರೆ ಹತ್ತಿರವಿಲ್ಲದ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾದಲ್ಲಿ 84 ದಿನಗಳ ರಜೆಯ ಜೊತೆಗೆ 100.00 ರೂಗಳ ವೈದ್ಯಕೀಯ ಬೋನಸ್ ಸಹ ದೊರೆಯುತ್ತದೆ.
12. ವಿಮಾ ಸೌಲಭ್ಯವನ್ನು ಹೊಂದಿರುವ ಕಾರ್ಮಿಕ ಕುಟುಂಬಕ್ಕೆ ತುರ್ತು ಸಂದರ್ಭದಲ್ಲಿ, ಹತ್ತಿರವಿರುವ ಯಾವುದೇ ಖಾಸಗೀ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಬಹುದು. (24 ಗಂಟೆಯೊಳಗೆ ಚಿಕಿತ್ಸಾಲಯಕ್ಕೆ ವರದಿ ಮಾಡಬೇಕು)

ಒಂದು ಸಣ್ಣ ಪ್ರಮಾಣದ ವಂತಿಗೆಯಿಂದ ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಇ.ಎಸ್.ಐ.ಸಿ.ಯು ಒದಗಿಸುತ್ತಿದೆ. ಉದಾಹರಣೆಗೆ ಸುಪ್ರೀಂ ಓವರ್ ಸೀಸ್ ನಲ್ಲಿ ಕೆಲಸ ಮಾಡುತ್ತಿದ್ದ, ಶ್ರೀ ಅಶ್ವತ್ಥ ನಾರಾಯಣರವರ ಬೋನ್ ಮ್ಯಾರೋ ಚಿಕಿತ್ಸೆಗಾಗಿ ಸುಮಾರು ರೂ. 20 ಲಕ್ಷಕ್ಕೂ ಹೆಚ್ಚು ಹಣವನ್ನು ಖರ್ಚು ಮಾಡಿದೆ.

ಇ.ಎಸ್.ಐ. ಸೌಲಭ್ಯಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯನ್ನು ಸಂಪರ್ಕಿಸಿ. ❑

## ಕಾಮನಬಿಲ್ಲು

# ಶುಭಾಶಯಗಳು



→
ಹಿತಶ್ರೀ
ಹುಟ್ಟಿದ ದಿನಾಂಕ: 28-12-2004
ತಾಯಿ : ಸುಗುಣಾಮೂರ್ತಿ
ಕಾರ್ಖಾನೆ : ವಿಗೋಸಾ ಎಕ್ಸ್‌ಪೋರ್ಟ್ಸ್



←
ಸ್ಫೂರ್ತಿ
ಹುಟ್ಟಿದ ದಿನಾಂಕ: 06-01-2004
ತಾಯಿ : ಎಚ್.ಕೆ. ಗೀತಾ
ಕಾರ್ಖಾನೆ : ವಿಗೋಸಾ ಎಕ್ಸ್‌ಪೋರ್ಟ್ಸ್



→
ದೀಪ್ತಿ
ಹುಟ್ಟಿದ ದಿನಾಂಕ: 11-02-2001
ತಾಯಿ : ಧನಲಕ್ಷ್ಮಿ
ಕಾರ್ಖಾನೆ : ವಿಗೋಸಾ ಎಕ್ಸ್‌ಪೋರ್ಟ್ಸ್



←
ಮನೋಜ್
ಹುಟ್ಟಿದ ದಿನಾಂಕ: 28-01-2002
ತಾಯಿ : ಸುಜಾತಾ
ಕಾರ್ಖಾನೆ : ಟೆಕ್ಸ್‌ಪೋರ್ಟ್ ಕ್ರಿಯೇಷನ್



→
ವಿಜಯ್ ಕುಮಾರ್
ಹುಟ್ಟಿದ ದಿನಾಂಕ: 28-1-1996
ತಾಯಿ : ಶಾರದಾ
ಕಾರ್ಖಾನೆ : ಟೆಕ್ಸ್‌ಪೋರ್ಟ್ ಕ್ರಿಯೇಷನ್



ನಮಸ್ತೆ ಎಕ್ಸ್‌ಪೋರ್ಟ್ ಕಾರ್ಖಾನೆಯ ಕಾರ್ಮಿಕರಾದ ಶ್ರೀಮತಿ ಶಾಂತಲಕ್ಷ್ಮಿ ಹಾಗೂ ಶ್ರೀ ಸಿದ್ಧರಾಜುರವರ ಹದಿನೇಳನೇ ವರ್ಷದ ವಿವಾಹ ವಾರ್ಷಿಕೋತ್ಸವದ ಈ ಶುಭಸಂದರ್ಭದಲ್ಲಿ ಸೂಜಿ-ದಾರ ಬಳಗ ಶುಭ ಹಾರೈಸುತ್ತದೆ.

*ಸ್ನೇಹಿತರೇ,*

ಸೂಜಿ-ದಾರ ಬಳಗವು ನಿಮ್ಮ ನೋವು ನಲಿವಿಗೆ ಸ್ಪಂದಿಸಲಿದೆ. ನಿಮ್ಮ ಬದುಕಿನ ಬವಣೆಗಳನ್ನು "ಬದುಕು-ಬವಣೆ" ಅಂಕಣಕ್ಕೂ, ಹಾಗೂ ನಿಮ್ಮ ಬದುಕಿನ ಸಂತಸದ ಘಳಿಗೆಯನ್ನು "ಕಾಮನಬಿಲ್ಲು" ಅಂಕಣಕ್ಕೂ ಫೋಟೋ ಹಾಗೂ ಮಾಹಿತಿಯೊಂದಿಗೆ ಪತ್ರಿಕೆಯ ವಿಳಾಸಕ್ಕೆ ಬರೆದು ಕಳಿಸಿ (ಉದಾ: ಮಕ್ಕಳ ಹುಟ್ಟುಹಬ್ಬ, ಮದುವೆ, ಪರೀಕ್ಷೆ ಫಲಿತಾಂಶ). ಸೂಜಿ-ದಾರ ಅದನ್ನು ಪ್ರಕಟಿಸಲು ಹರ್ಷಿಸುತ್ತದೆ. *-ಸಂಪಾದಕರು.*

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

ಸಿವಿಡೆಪ್ ಇಂಡಿಯಾ
ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು-29
ದೂ.: 26751320,

ಶನಿವಾರ ಸಂಜೆ 5-30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10-30ರ ನಂತರ

ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರ ಸಂಸ್ಥೆಗಳು

1. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ ಬೆಂಗಳೂರು-560009
   ದೂ.: 22216485
2. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್, ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
3. **ವಿಮೋಚನಾ**
   ನಂ, 33/1-9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು-38
   ದೂ.: 25492781 / 25492782
4. **ಹ್ಯೂಮನ್ ರೈಟ್ ಲಾ ನೆಟ್‌ವರ್ಕ್**
   ನಂ.51, 2ನೇ ಮಹಡಿ, ಇನ್‌ಫೆಂಟ್ರಿ ರಸ್ತೆ
   ಮೆಡಿನೋವ ಆಸ್ಪತ್ರೆ ಬಳಿ
   ಶಿವಾಜಿನಗರ, ಬೆಂಗಳೂರು-560 001
   ದೂ.: 25762477
5. **ಪರ್ಯಾಯ ಕಾನೂನು ವೇದಿಕೆ (ALF)**
   ನಂ.4, 3ನೇ ಅಡ್ಡರಸ್ತೆ
   8ನೇ ಮುಖ್ಯರಸ್ತೆ,
   ವಸಂತನಗರ, ಬೆಂಗಳೂರು-560052
   ದೂ.: 22356845
6. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ಅರಮನೆ ರಸ್ತೆ, ಬೆಂಗಳೂರು
   ದೂ.: 22268073 / 22203068

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 8/3, ಶ್ರೀಮಾತಾ ನಿಲಯ, ಎನ್.ಟಿ.ವೈ ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಪ್ರಕಾಶಕರು : ಸಿವಿಡೆಪ್-ಇಂಡಿಯಾ. ಮುದ್ರಣ : ಇಳಾ ಪ್ರಿಂಟರ್ಸ್, ಬೆಂಗಳೂರು - 560 026. ದೂ. : 30615773 / 26757159

Scanned with OKEN Scanner